# **<u>ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕೆ.ಆರ್ ನಗರ</u>**

**ಸಿಸಿ ನಂ. 299/2024**

**ಪಿರ್ಯಾದುದಾರರುಃ** ನವನಗರ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಕೆ ಆರ್ ನಗರ

**–ವಿರುದ್ಧ –**

**ಆರೋಪಿಃ** ಶ್ರೀ. ವಿನಯ್.ಯು.ಎಸ್ ಬಿನ್ ಶ್ರೀನಿವಾಸ್‌ಗೌಡ, ವಾಸಃ ಉಂಡವಾಡಿ ಗ್ರಾಮ, ಮುಳ್ಳೂರು ಪೋಸ್ಟ್ ಗಾವಡಗೆರೆ ಹೋಬಳಿ, ಹುಣಸೂರು ತಾಲ್ಲೂಕು.

**<u>ಆಪಾದನೆ</u>**

ಆರೋಪಿಯಾದ ನೀವು ಪಿರ್ಯಾದುದಾರರಿಗೆ ಕಾನೂನುಬದ್ಧವಾಗಿ ಪಾವತಿ ಮಾಡಬೇಕಾದ ರೂ.77,567/– ಮರುಪಾವತಿಗಾಗಿ **ವಿಜಯಾ ಬ್ಯಾಂಕ್, ಕೆ ಆರ್ ನಗರ ಶಾಖೆ,** ಇಲ್ಲಿಯ ಚೆಕ್ ನಂಃ 132576 ದಿನಾಂಕಃ 07.09.2023 ರೂ.77,567/– ಎಂದು ನಮೂದಿಸಿ ಚೆಕ್ಕನ್ನು ನೀಡಿದ್ದು, ಸದರಿ ಚೆಕ್ಕನ್ನು ಪಿರ್ಯಾದುದಾರರು ತಮ್ಮ ಖಾತೆಯನ್ನು ಹೊಂದಿರುವ **ನವನಗರ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್, ಕೆ ಆರ್ ನಗರ ಶಾಖೆ,** ಇಲ್ಲಿ ನಗದೀಕರಿಸಲು ಹಾಜರುಪಡಿಸಿದಾಗ, ಸದರಿಯವರು ನಿಮ್ಮ ಖಾತೆಯನ್ನು **"ಸಾಕಷ್ಟು ಹಣವಿಲ್ಲ"** ಎಂಬ ಹಿಂಬರಹಗಳೊಂದಿಗೆ ಚೆಕ್ಕು ಅಮಾನ್ಯಗೊಂಡಿದ್ದು, ಆ ಬಗ್ಗೆ ಸದರಿ ಬ್ಯಾಂಕಿನವರು ದಿನಾಂಕ: 15.12.2023 ರಂದು ಹಿಂಬರಹವನ್ನು ನೀಡಿದ್ದು, ನಂತರ ಫಿರ್ಯಾದಿದಾರರು ತಮ್ಮ ವಕೀಲರ ಮುಖಾಂತರ 28.12.2023 ಬರವಣಿಗೆ ರೂಪದಲ್ಲಿ ತಿಳುವಳಿಕೆ ಪತ್ರವನ್ನು ಕಳುಹಿಸಿದ್ದರೂ ಸಹ ಚೆಕ್ಕಿನಲ್ಲಿರುವ ಹಣವನ್ನು ಮರುಪಾವತಿ ಮಾಡಿರುವುದಿಲ್ಲ, ಆ ಕಾರಣ ನೀವು ವರ್ಗಾವಣೀಯ ಲಿಖಿತಗಳ ಅಧಿನಿಯಮ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿದ್ದೀರೆಂದು ಆಪಾದಿಸಲಾಗಿದೆ.

ಪ್ರಶ್ನೆಃ–1 ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೆ?

ಉತ್ತರಃ

ಪ್ರಶ್ನೆಃ–2 ಚೆಕ್ಕು ಸಂಖ್ಯೆ 132576 ನಿಮ್ಮ ಬ್ಯಾಂಕಿನ ಖಾತೆಯ ಚೆಕ್ಕು ಆಗಿರುತ್ತದೇಯೇ ಅಥವಾ ಇಲ್ಲವೇ ?

ಉತ್ತರಃ

ಪ್ರಶ್ನೆ:-3 ಚೆಕ್ಕು ಸಂಖ್ಯೆ **132576** ರಲ್ಲಿ ಇರುವ ಸಹಿಯನ್ನು ಒಪ್ಪಿಕೊಳ್ಳುವೀರಾ ಅಥವಾ ಇಲ್ಲವೇ ?

ಉತ್ತರಃ

ಪ್ರಶ್ನೆ-4 ಚೆಕ್ಕು ಸಂಖ್ಯೆ **132576** ನೀವು ಪಿರ್ಯಾದಾರರಿಗೆ ನೀಡಿದ್ದೀರಾ ಅಥವಾ ಇಲ್ಲವೇ ?

ಉತ್ತರಃ

ಪ್ರಶ್ನೆ-5 ಸದರಿ ಚೆಕ್ಕನ್ನು ಸಾಲದ ಬಾಧ್ಯತೆಗಾಗಿ ದೂರುದಾರರಿಗೆ ನೀಡಲಾಗಿದೆ ಎಂಬುದನ್ನು ಒಪ್ಪಿಕೊಳ್ಳುವೀರಾ ಅಥವಾ ಇಲ್ಲವೇ ?

ಉತ್ತರಃ

## ಆರೋಪಿಯ ಪ್ರತಿರಕ್ಷಣೆಗಾಗಿ ಕೇಳಲಾದ ಪ್ರಶ್ನೇಗಳು

ಪ್ರಶ್ನೆ-ಎ ಚೆಕ್ಕನ್ನು ಭದ್ರತೆಗಾಗಿ ನೀಡಲಾಗಿದೆಯೇ ?

ಉತ್ತರಃ

ಪ್ರಶ್ನೆ-ಬಿ ಸಾಲವನ್ನು ಈಗಾಗಲೇ ಮರುಪಾವತಿ ಮಾಡಲಾಗಿದೆಯೇ ?

ಉತ್ತರಃ

ಪ್ರಶ್ನೆ-ಸಿ ಚೆಕ್ಕನ್ನು ದುರುಪಯೋಗ ಪಡೆಸಿಕೊಂಡಿದ್ದಾರೇಯೇ ?

ಉತ್ತರಃ

ಪ್ರಶ್ನೆ-6 ಪ್ರಕರಣವನ್ನು ಈ ಹಂತದಲ್ಲಿ ರಾಜಿ ಮಾಡಿಕೊಳ್ಳಲು ಒಪ್ಪಿಗೇ ಇದೇಯೇ ಅಥವಾ ಇಲ್ಲವೇ ?

ಉತ್ತರಃ

ಪ್ರಶ್ನೆ-7 ಮೇಲ್ಕಂಡ ಆಪಾದನೆಯನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆ ಆಗಬೇಕೇ?

ಉತ್ತರಃ

(ದಿನಾಂಕ **13.01.2026** ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿಯುವ ಭಾಷೆಯಲ್ಲಿ ಆರೋಪವನ್ನು ಓದಿ, ತಿಳಿಸಿ ಹೇಳಿ, ಕೇಳಿ ಉತ್ತರವನ್ನು ಪಡೆಯಲಾಗಿದೆ ಎಂದು ಈ ಮೂಲಕ ಧೃಡೀಕರಿಸಿದೆ)

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ. ಕೆ ಆರ್ ನಗರ.**